**ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ, ಹೆಚ್.ಡಿ.ಕೋಟೆ**

**ಓ.ಎಸ್ . ನಂ. 86/2018**

**ಸಾಕ್ಷಿಗೆ ದಿನಾಂಕ 22.3.2025 ರಂದು ಪ್ರಮಾಣವಚನ ಬೋಧಿಸಲಾಯಿತು.**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಬಿ.ಎಸ್.ಸಂಗಮೇಶ್ವರ | ಡಿ.ಡಬ್ಲ್ಯೂ-3 |
| ತಂದೆಯ/ಗಂಡನ ಹೆಸರು | : | ಬಿ.ಎಲ್.ಶೇಖರಯ್ಯ | |
| ವಯಸ್ಸು | : | 70 | |
| ಉದ್ಯೋಗ | : | ವಕೀಲರು | |
| ವಾಸಸ್ಥಳ | : | ಹೆಚ್.ಡಿ.ಕೋಟೆ | |

**ಮುಖ್ಯ ವಿಚಾರಣೆಃ 1 ರಿಂದ 3 ನೇ ಪ್ರತಿವಾದಿ ಪರ ಶ್ರೀ ಬಿ.ಎಲ್.ಟಿ ವಕೀಲರಿಂದಃ**

ನಾನು 1998 ರಿಂದ ಇಲ್ಲಿಯವರೆಗೆ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ನಿಡಿ7 ಪ್ರಮಾಣಪತ್ರವನ್ನು ನಾನೇ ಅಟೆಸ್ಟ್ ಮಾಡಿರುತ್ತೇನೆ. ಸಾಕ್ಷಿದಾರರು ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಡಿ7 ಎ ಎಂದು ಗುರುತಿಸಲಾಯಿತು. ನಿಡಿ7 ರಲ್ಲಿ ನಮೂದಿಸಿರುವ ಕಾನ್‌ಸಿಂಗ್ ರವರ ಪತ್ನಿ ಸೋಲಂದೇವಿ ರವರು ನನ್ನ ಸಮಕ್ಷಮ ನಿಡಿ7 ಪ್ರಮಾಣಪತ್ರಕ್ಕೆ ಸಹಿ ಮಾಡಿರುತ್ತಾರೆ. ನಿಡಿ7 ರಲ್ಲಿ ಎರಡು ಕಡೆ ತಿದ್ದುಪಡಿಯಾಗಿರುವ ಬಗ್ಗೆ ನಮೂದು ಮಾಡಿರುತ್ತೇನೆ. ನಿಡಿ7 ರಲ್ಲಿ ಸದರಿ ಪ್ರಮಾಣಪತ್ರ ಮಾಡಿದವರನ್ನು ಎ.ಟಿ.ಕೃಷ್ಣ ಎಂಬುವವರು ಗುರುತಿಸಿರುತ್ತಾರೆ ಎಂದು ನಿಡಿ7 ರಲ್ಲಿ ಸಹಿ ಮಾಡಿರುತ್ತಾರೆ. ನಿಡಿ7 ರಲ್ಲಿರುವ ಸಹಿಗಳನ್ನು ಸೋಲಂದೇವಿ ರವರು ಮಾಡಿರುತ್ತಾರೆ. ಸಾಕ್ಷಿದಾರರು ನಿಡಿ7 ರಲ್ಲಿರುವ ಸೋಲಂದೇವಿ ರವರ ಮೂರು ಸಹಿಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಡಿ7 ಬಿ ಎಂದು ಗುರುತಿಸಲಾಯಿತು.

ಪಾಟೀಸವಾಲುಃ ಸಮಯಾವಕಾಶ ಕೋರಿದ್ದು ಸಮಯ ನೀಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸಾ ಸ ಇ ಒ.,

ಹಿರಿಯ ಸಿ.ಜೆ ಮತ್ತು ಜೆ.ಎಂ.ಎಫ್.ಸಿ.,
ಹೆಚ್.ಡಿ.ಕೋಟೆ